ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 1549/25**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – **1**

ದಿನಾಂಕಃ 16.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಪ್ರಶಾಂತ್ ಸಿ. ಎಲ್ |
| ತಂದೆಯ ಹೆಸರು | – ಲೋಕನಾಥ |
| ವಯಸ್ಸು | – 59 ವರ್ಷ |
| ವೃತ್ತಿ | – ವ್ಯವಸಾಯ |
| ವಾಸಸ್ಥಳ | – ಹೊದ್ದೂರು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–2 ರಿಂದ 4 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ದಿಃ 17.11.2024 ರಂದು ಮದ್ಯಾಹ್ನ 2.00 ಗಂಟೆಗೆ ನಾನು ಹೊದ್ದೂರು ಗ್ರಾಮದಲ್ಲಿರುವ ನನ್ನ ತೋಟದ ಸರ್ವೆ ನಂಬರ್ 49/1 ರಲ್ಲಿ ಕೆಲಸ ಮಾಡಿಸುತ್ತಿದ್ದೆ. ಆಗ ಆರೋಪಿತರು ಬಂದು ಏಕಾಏಕಿ ನನ್ನ ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ನಾನು ಆರೋಪಿಗಳಿಗೆ ಏಕೆ ಈ ರೀತಿ ನನ್ನ ಜಮೀನಿಗೆ ಏಕಾಏಕಿ ನುಗ್ಗಿದ್ದೀರಿ ಎಂದು ಕೇಳಿದ್ದಕ್ಕೆ ಆರೋಪಿಗಳು ನನ್ನ ಜೊತೆ ಗಲಾಟೆ ಮಾಡಿ ಇದು ಸರ್ಕಾರದ ಜಮೀನು, ನಾನು ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಿರುತ್ತಾರೆ. ಅಲ್ಲದೆ ಆರೋಪಿಗಳು ತಾವು ಎಸ್ ಸಿ ಜನಾಂಗಕ್ಕೆ ಸೇರಿದವರಾಗಿದ್ದು, ನನ್ನ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸುವುದಾಗಿ ನನಗೆ ಹೆದರಿಸಿರುತ್ತಾರೆ. ನಾನು ಆ ದಿನ ನನ್ನ ಜಮೀನಿನಿಂದ ಮನೆಗೆ ಹೋಗಿರುತ್ತೇನೆ. ನಂತರ ದಿಃ 11.03.2025 ರಂದು ಬೆಃ 9.00 ಗಂಟೆ ಸುಮಾರಿಗೆ 1ನೇ ಆರೋಪಿ ಇತರೆ ಆರೋಪಿಗಳೊಂದಿಗೆ ನನ್ನ ಸದರಿ ಜಮೀನಿಗೆ ನುಗ್ಗಿ , ನನ್ನ ತೋಟಕ್ಕೆ ಹೋಗುವ ರಸ್ತೆಯಲ್ಲಿ ಇದ್ದ ಕಾಡು ಮರವನ್ನು ಕಡಿದು, ನನ್ನ ಜಮೀನಿನಲ್ಲಿ

ಟೆಂಟ್ ಹಾಕಿರುತ್ತಾರೆ. ಆಗ ನಾನು ಆರೋಪಿಗಳನ್ನು ಟೆಂಟ್ ಹಾಕಬೇಡಿ ಎಂದು ತಡೆಯಲು ಹೋದಾಗ ಆರೋಪಿಗಳು ತಾವು ಎಸ್ ಸಿ ಜನಾಂಗಕ್ಕೆ ಸೇರಿದವರಾಗಿದ್ದು, ನನ್ನ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸುವುದಾಗಿ ನನಗೆ ಹೆದರಿಸಿರುತ್ತಾರೆ ಹಾಗೂ ಆರೋಪಿಗಳು ನಿನ್ನನ್ನು ಕೊಲ್ಲುತ್ತೇವೆ ಎಂದು ಪ್ರಾಣಬೆದರಿಕೆ ಕೂಡ ಹಾಕಿರುತ್ತಾರೆ. ಚಾಸಾ-2 ರವರಿಗೆ ಸೇರಿದ ಕಾಫಿ ತೋಟದಲ್ಲಿ ಸದರಿ ರಸ್ತೆ ಇದ್ದು, ನಾನು ಚಾಸಾ-2 ರವರಿಂದ ಅನುಮತಿ ಪಡೆದುಕೊಂಡು ಮೇಲೆ ಹೇಳಿ ಸರ್ವೆ ನಂಬರ್ ಜಮೀನಿನ ಕಾಫಿ ತೋಟಕ್ಕೆ ಹೋಗುತ್ತೇನೆ. ಸದರಿ ರಸ್ತೆಯನ್ನು ಆರೋಪಿಗಳು ಅಕ್ರಮವಾಗಿ ಶೆಡ್ ಹಾಕಿ ಬಂದ್ ಮಾಡಿರುತ್ತಾರೆ. ಈವತ್ತಿಗೂ ಕೂಡ ಸದರಿ ರಸ್ತೆಯನ್ನು ಆರೋಪಿಗಳು ಬಂದ್ ಮಾಡಿರುತ್ತಾರೆ. ಆರೋಪಿಗಳು ನನ್ನ ತೋಟದಲ್ಲಿದ್ದ ಕಾಫಿ ಗಿಡಗಳನ್ನು ಹಾಗೂ ಅಡಿಕೆ ಮರಗಳನ್ನು ಕಡಿದು ಅಕ್ರಮವಾಗಿ ಶೆಡ್ ಹಾಕಿರುತ್ತಾರೆ. ಆದ್ದರಿಂದ ನಾನು ಆರೋಪಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೊಲೀಸರು ನಾನು ಘಟನಾ ಸ್ಥಳ ತೋರಿಸಿದ ಮೇರೆಗೆ ಪೊಲೀಸರು ನನ್ನ ಮತ್ತು ಚಾಸಾ-3 ಮತ್ತು 4 ರವರ ಸಮಕ್ಷಮ ಸ್ಥಳ ಮಹಜರು ಮಾಡಿರುತ್ತಾರೆ. ಪೊಲೀಸರು ಸ್ಥಳದ ಕಚ್ಚಾ ನಕಾಶೆಯನ್ನು ಕೂಡ ತಯಾರಿಸಿರುತ್ತಾರೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಪೊಲೀಸರು ಫೊಟೋಗಳನ್ನು ತೆಗೆದಿರುತ್ತಾರೆ, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ

ಮತ್ತು ಚಾಸಾ–3 ಮತ್ತು 4 ರವರ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಖರ್ಚು ವಿಧಿಸಿ ಪಾಟಿ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.